**ದಿನಾಂಕಃ 14.07.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – 1 ರಿಂದ 5ನೇ ಪ್ರತಿವಾದಿ ಪರ ವಕೀಲರಿಂದ**

ತಮ್ಮಯ್ಯರವರು ಸಿ ಶೆಡ್ಯೂಲ್ ಸ್ವತ್ತನ್ನು 2006 ರಲ್ಲಿ ಖರೀದಿ ಮಾಡಿದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರ ಕುಟುಂಬಕ್ಕೆ ನಾವು ಸೇರಿಲ್ಲದ ಕಾರಣ ಸಿ ಶೆಡ್ಯೂಲ್ ಸ್ವತ್ತನ್ನು ತಮ್ಮಯ್ಯರವರು ಯಾವಾಗ ಖರೀದಿ ಮಾಡಿದರೆಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರು ಸಿ ಶೆಡ್ಯೂಲ್ ಸ್ವತ್ತನ್ನು 1999 ರಲ್ಲಿ ಖರೀದಿ ಮಾಡಿದರೆಂದು ಹೇಳುವುದು ಸರಿಯಲ್ಲ. ಸಿ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ಸಿ ಶೆಡ್ಯೂಲ್ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಯಾವ ಬೆಳೆ ಬೆಳೆದಿದ್ದಾರೆಂದು ನನಗೆ ಗೊತ್ತಿಲ್ಲ. ಸಿ ಶೆಡ್ಯೂಲ್ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿರುವ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರ ಆರೋಗ್ಯಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಮೂಲ ಕ್ರಯ ಪತ್ರ ನೋಡಿದ್ದೇನೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು.

1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರು ಯಾವಾಗ ಮೃತಪಟ್ಟರೆಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರು ಮೃತಪಟ್ಟಾಗ ಅವರ ಆರೋಗ್ಯ ಸ್ಥಿತಿ ಮತ್ತು ಮಾನಸಿಕ ಸ್ಥಿತಿ ಹೇಗಿತ್ತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರು ಅವರ ಆಸ್ತಿಗೆ ಸಂಬಂಧಪಟ್ಟಂತೆ 1ನೇ ಪ್ರತಿವಾದಿಯ ಹೆಸರಿಗೆ ಏನೆಲ್ಲಾ ದಾಖಲೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಸಿ ಶೆಡ್ಯೂಲ್ ಸ್ವತ್ತಿನ ಮೂಲ ಮಾಲೀಕರ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ನನಗೂ ಮತ್ತು 1 ರಿಂದ 5ನೇ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. 1ನೇ ಪ್ರತಿವಾದಿ ಅವರ ಗಂಡ ತೀರಿಹೋದ ನಂತರ ಪಿಂಚಣಿಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರು ಸಾಯುವವರೆಗೂ ಆರೋಗ್ಯವಂತರಾಗಿ ದೃಢಕಾಯರಾಗಿದ್ದ ಬಗ್ಗೆ ಗೊತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಆರೋಗ್ಯವಾಗಿರಲಿಲ್ಲ ಎಂದು ಉತ್ತರಿಸುತ್ತಾರೆ. ಅವರು ಆರೋಗ್ಯವಾಗಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರನ್ನು ನಾನು ನೋಡಿರುವುದಿಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರ ಅಂತ್ಯಕ್ರಿಯೆಗೆ ನಾನು ಹೋಗಿರುವುದಿಲ್ಲ. ಅವರ ಮರಣ ನಂತರದ ಉತ್ತರಕ್ರಿಯಾದಿಗೆ ನಾನು ಹೋಗಿರುವುದಿಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸಾಕ್ಷಿಯು ಈ ಪ್ರಶ್ನೆಗೆ ಉತ್ತರಿಸಿರುವುದಿಲ್ಲ.

ಬಿ ಶೆಡ್ಯೂಲ್ ಸ್ವತ್ತಿನ ಆಸ್ತಿ ಹಂಚಿಕೆಯಲ್ಲಿ 1ನೇ ಪ್ರತಿವಾದಿ ಮತ್ತು ಅವರ ಗಂಡನ ತಮ್ಮಂದಿರ ನಡುವೆ ವಿವಾದ ಇದೆ ಎಂದರೆ ವಿವಾದವಿಲ್ಲ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿಯ ಗಂಡನ ತಮ್ಮಂದಿರು ನಮ್ಮ ಜೊತೆ ಚೆನ್ನಾಗಿದ್ದಾರೆ ಎಂದರೆ ಸರಿಯಲ್ಲ. 1 ಮತ್ತು 2ನೇ ವಾದಿಗಳು ನನ್ನನ್ನು ಎತ್ತಿ ಕಟ್ಟಿಸಿ ಈ ದಾವೆಯನ್ನು ನನ್ನ ಮೂಲಕ

ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ನಾವು 1ನೇ ಪ್ರತಿವಾದಿಯ ಗಂಡನ ಕುಟುಂಬಕ್ಕೆ ಸೇರದೇ ಇದ್ದರೂ ನಾವು ಮತ್ತು 1ನೇ ಪ್ರತಿವಾದಿಯ ಗಂಡನ ತಮ್ಮಂದಿರು ಸೇರಿಕೊಂಡು ವಿಭಾಗ ಮಾಡಿದಂತೆ ಈ ದಾವಾ ಸಲ್ಲಿಸಿದ ನಂತರ ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ತಮ್ಮಯ್ಯರವರು ವಿಲ್ ಮಾಡುವಾಗ ಅವರ ಆರೋಗ್ಯ ಸ್ಥಿತಿ ಮತ್ತು ಮನಸ್ಥಿತಿ ಚೆನ್ನಾಗಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲವೆಂದು ಉತ್ತರಿಸುತ್ತಾರೆ.

**ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.